ಲಂಡನ್‌ನಲ್ಲಿ, 2011ರಲ್ಲಿ ಭಾರತದಲ್ಲಿ ಪ್ರಕಟವಾಯಿತು. ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ, ಜಿ.ಎಸ್. ಶಿವರುದ್ರಪ್ಪ, ಭದ್ರಿರಾಜು ಕೃಷ್ಣಮೂರ್ತಿ, ಕೆ.ವಿ. ನಾರಾಯಣ ಇವರೆಲ್ಲ ಇದರ ಬಗ್ಗೆ ಮೆಚ್ಚಿ ಬರೆದಿದ್ದಾರೆ. ಸಾವಿರಕ್ಕೂ ಹೆಚ್ಚು ವ್ಯಾಕರಣ ನಿಯಮಗಳನ್ನು ನಿರೂಪಿಸಿ ಈ ಪುಸ್ತಕ ರಚಿಸಿದ್ದೇನೆ. ಹಿಂದಿನ ವೈಯ್ಯಾಕರಣಿಗಳು ಪದರಚನೆಯ ಬಗೆಗೆ ಗಮನ ನೀಡುವಲ್ಲಿ ನಾನು ವಾಕ್ಯರಚನೆಯತ್ತ ಗಮನ ಹರಿಸಿದ್ದೇನೆ. ವ್ಯಾಕರಣ ವಿವರ, ಪದರಚನೆ, ಧ್ವನಿರಚನೆ ವಿವರಗಳೆಲ್ಲ ಇದರಲ್ಲಿ ಸೇರ್ಪಡೆಯಾಗಿದೆ. ಇನ್ನೊಂದು ಸಂಶೋಧನೆ ಕ್ಷೇತ್ರ ಮನೋವೈಜ್ಞಾನಿಕ ಭಾಷಾ ವಿಜ್ಞಾನ. ಇದಕ್ಕಾಗಿ ಹತ್ತು ಭಾಷೆಗಳ ಅಧ್ಯಯನ ಮಾಡಿದ್ದೇನೆ. ಒಂದು ಸಂದರ್ಭದಲ್ಲಿ ಒಂದು ವಾಕ್ಯ ಪ್ರಯೋಗ ಬೇರೆ ಬೇರೆ ಭಾಷೆಗಳಲ್ಲಿ ಹೇಗೆ ಆಗುತ್ತದೆಂದು ಪ್ರಾಯೋಗಿಕವಾಗಿ ಅಧ್ಯಯನ ಮಾಡಿದ್ದೇನೆ. ಇದೊಂದು ಬಗೆಯಲ್ಲಿ ಭಾಷಾ ವ್ಯವಹಾರ ಮತ್ತು ಮನೋವ್ಯಾಪಾರದ ಹಿನ್ನೆಲೆಯ ಅಧ್ಯಯನ. ಇದಕ್ಕೂ ಭಾಷಾವಿಜ್ಞಾನಿಗಳ ಮೆಚ್ಚುಗೆ ಸಿಕ್ಕಿದೆ. ನಂತರ 'ಇಂದಿನ ಕನ್ನಡ: ರಚನೆ ಮತ್ತು ಬಳಕೆ' ಪುಸ್ತಕ. ಇದರಲ್ಲಿ ಪದರಚನೆ, ವಾಕ್ಯಬಂಧ, ನುಡಿ ಲಕ್ಷಣ, ಭಾಷಾಸಂಪರ್ಕ, ಪ್ರಭಾವ ಕುರಿತ ಚಿಂತನೆಗಳಿವೆ. 1995ರಲ್ಲಿ ಕನ್ನಡ ವಿಶ್ವವಿದ್ಯಾಲಯ ಇದನ್ನು ಹೊರತಂದಿದೆ. ಮತ್ತೆ ಅಭಿನವದವರು ಪ್ರಕಟಿಸಿದ್ದಾರೆ. ಅನನ್ಯ ಕೃತಿ, ಭಾರತೀಯ ಸಂಸ್ಕೃತಿ ಕುರಿತ ಬೃಹದ್ಗ್ರಂಥ ಇದರಲ್ಲಿ ಚರಿತ್ರೆ, ಧರ್ಮ, ಸಾಹಿತ್ಯ, ನಾಟಕ, ಭಾಷೆ, ಸಮಾಜ, ಆರ್ಥಿಕತೆ, ಸಂಗೀತ, ರಾಜಕೀಯ ಹೀಗೆ ಹಲಾವಾರು ಆಯಾಮಗಳ ಚರ್ಚೆಯಾಗಿದೆ. ಗಿರೀಶ ಕಾರ್ನಾಡ, ಸಿ.ಡಿ. ನರಸಿಂಹಯ್ಯ, ಹಿರಿಯಣ್ಣ, ಅನಂತಮೂರ್ತಿ, ಎಂ.ಎನ್. ಶ್ರೀನಿವಾಸ್ ಮತ್ತಿತರ 40 ಹಿರಿಯರ ಲೇಖನಗಳು ಇವೆ. **Language and Society in South Asia**, ಕೃತಿಯನ್ನು ಕೇಂಬ್ರಿಡ್ಜ್ ಯೂನಿರ್ವಸಿಟಿ ಪ್ರೆಸ್‌ನವರು ಪ್ರಕಟಿಸಿದ್ದಾರೆ. ಭಾರತೀಯ ಭಾಷೆ, ಲಿಪಿ ಚರಿತ್ರೆ, ಬಹುಭಾಷಿಕತೆ, ಸಂಪರ್ಕ ಭಾಷೆ ಇದರ ಬಗ್ಗೆ ಲೇಖನಗಳಿರುವ ಈ ಆಧಾರ ಗ್ರಂಥ ಎಲ್ಲ ಕಡೆ ಅಧ್ಯಯನಕ್ಕೆ ಬಳಕೆಯಾಗುತ್ತಿದೆ. ಶಂಕರ ಮೊಕಾಶಿ ಪುಣೇಕರ ಅವರ 'ಗಂಗವ್ವ ಗಂಗಮಾಯಿ' ಕಾದಂಬರಿಯ ಭಾಷಾಂತರ ಮುಗಿಸಿರುವೆ. ಸೂಕ್ತ ಪ್ರಕಾಶಕರಿಗೆ ಹುಡುಕುತ್ತಿದ್ದೇನೆ. ಇನ್ನು ಕುಮಾರವ್ಯಾಸನ ಬಗೆಗೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪುಸ್ತಕ ಬರೆಯಬೇಕು. 'ಕನ್ನಡದಲ್ಲಿ ಇಂಗ್ಲಿಷ್– ಇಂದಿನ ಕನ್ನಡದ ಕುತೂಹಲಗಳು' ಕುರಿತು ಪುಸ್ತಕಗಳನ್ನು ಬರೆಯಬೇಕೆಂದಿರುವೆ.

◆ ಇದೆಲ್ಲದಕ್ಕೂ ನಿಮ್ಮ ಶ್ರೀಮತಿ ಮೀನಾ ಅವರ ಸಹಕಾರ ಇದ್ದೇ ಇರುತ್ತದಲ್ಲವೆ?

ನಮ್ಮಿಬ್ಬರ ಅಧ್ಯಯನದ ವಿಷಯ ಒಂದೇ. ಆಕೆಯೂ ಸ್ಟೋನಿ ಬ್ರೂಕ್‌ನಲ್ಲಿ ಪ್ರಾಧ್ಯಾಪಕಿ. ಸಾಮಾನ್ಯವಾಗಿ ನಮ್ಮ ಓದು, ಬರವಣಿಗೆ ಒಟ್ಟಿಗೆ ಇರುತ್ತದೆ. ಕೆಲವು ಲೇಖನಗಳನ್ನು ನಾವಿಬ್ಬರೂ ಬರೆದು ಪ್ರಕಟಿಸಿರುವುದಿದೆ. ಮೀನಾ ಅವರ ಮುಖ್ಯ ಅಧ್ಯಯನ ವಿಷಯ ಸಾಮಾಜಿಕ ಭಾಷಾಶಾಸ್ತ್ರ. ಮನೋವೈಜ್ಞಾನಿಕ, ಸಾಹಿತ್ಯಿಕ, ರಾಚನಿಕ, ಸಾಮಾಜಿಕ, ಬಹುಭಾಷಿಕತೆ, ದ್ವಿಭಾಷಾ ಕಲಿಕೆ ಇವು ನನ್ನ ಆಸಕ್ತಿಯ ಕ್ಷೇತ್ರಗಳು.

◆ ನಿಮ್ಮ ಕರ್ನಾಟಕ, ಕನ್ನಡ ಪ್ರೀತಿ ನೋಡಿದರೆ ನಿವೃತ್ತಿಯ ನಂತರ ಇತ್ತಲೇ...?

ಬನ್ನಿ ಎಂದು ಕೇಳುತ್ತಿದ್ದೀರಾ? ಉದ್ಯೋಗ, ಅಧ್ಯಯನ, ಚಿಂತನೆ ಈ ವಿಚಾರದಲ್ಲಿ ನನಗೆ ನಿವೃತ್ತಿ ಇಲ್ಲ. ವರ್ಷಕ್ಕೆರಡು ಬಾರಿ ಕರ್ನಾಟಕಕ್ಕೆ ಬರುತ್ತಲೇ ಇದ್ದೇನೆ. ಅತ್ಯಂತ ಪ್ರೀತಿ ಪಾತ್ರ ಗೆಳೆಯರು, ಬಂಧುಗಳು, ವಿದ್ವಾಂಸರು ಇಲ್ಲಿದ್ದಾರೆ. ನನ್ನ ವಾತಾವರಣವೆಲ್ಲ ಕನ್ನಡಮಯವೇ. ಬೆಂಗಳೂರಲ್ಲೇ ಸ್ವಂತ ಮನೆ ಇದೆ. ಇಲ್ಲಿ ಇರುವುದು ನಮ್ಮನೆ, ಅಲ್ಲಿ ಇರುವುದು ಸುಮ್ಮನೆ. ●